ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ರೇಡಿಯೋ 91.2 FM

## ಸಮುದಾಯ ರೇಡಿಯೋ ಕೇಂದ್ರ

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

**ಊಟಿ ರಸ್ತೆ, ಮೈಸೂರು 570025**

**ಜೆಎಸ್‌ಎಸ್ ಮಹಾವಿದ್ಯಾಪೀಠ :** ಸಹಸ್ರ ವರ್ಷಗಳಿಗೂ ಮಿಗಿಲಾದ ಉಜ್ವಲ ಇತಿಹಾಸವನ್ನು ಹೊಂದಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಮಾನವನ ಅಭ್ಯುದಯಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡಿದೆ. 23ನೆಯ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅನುಪಮ ದೂರದರ್ಶಿತ್ವದ ಫಲವಾಗಿ 1954ರಲ್ಲಿ ಸ್ಥಾಪನೆಯಾದ ಜೆಎಸ್‌ಎಸ್ ಮಹಾವಿದ್ಯಾಪೀಠವು ಇಂದಿನ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಅಪೂರ್ವವಾದ ಕ್ರಿಯಾಶಕ್ತಿ ಹಾಗೂ ಮಾರ್ಗದರ್ಶನಗಳ ಫಲವಾಗಿ ದೇಶ–ವಿದೇಶಗಳಲ್ಲಿ 300ಕ್ಕೂ ಹೆಚ್ಚಿನ ಸಂಸ್ಥೆಗಳನ್ನು ಹೊಂದಿದೆ. ಇವುಗಳಲ್ಲಿ ಮೈಸೂರಿನಲ್ಲಿರುವ ಜೆಎಸ್‌ಎಸ್ ಸಮುದಾಯ ರೇಡಿಯೋ ಕೇಂದ್ರವೂ ಒಂದಾಗಿದೆ.

**ಜೆಎಸ್‌ಎಸ್ ಸಮುದಾಯ ರೇಡಿಯೋ ಕೇಂದ್ರ :** ಜೆಎಸ್‌ಎಸ್ ಸಮುದಾಯ ರೇಡಿಯೋ ಕೇಂದ್ರವು ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಆವರಣದಲ್ಲಿದೆ. ಸಮುದಾಯದ ಅವಶ್ಯಕತೆ ಹಾಗೂ ಸಮೀಕ್ಷೆಯ ಫಲಿತಾಂಶದ ಆಧಾರದ ಮೇರೆಗೆ ಮೈಸೂರು ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಅಭಿವೃದ್ಧಿ ವಿಚಾರಗಳ ಕುರಿತು ಮಾಹಿತಿ ಮತ್ತು ಜಾಗೃತಿಯನ್ನು ಸಕಾಲದಲ್ಲಿ ಒದಗಿಸಿ, ಸಶಕ್ತ ಹಾಗೂ ಜಾಗೃತ ಸಮುದಾಯವನ್ನಾಗಿಸುವುದರ ಮೂಲಕ ಸಮಗ್ರ ಅಭಿವೃದ್ಧಿಯನ್ನು ಕಾಣುವ ಗುರಿಯೊಂದಿಗೆ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡಲಾಗುತ್ತಿದೆ.

**ಸಮುದಾಯ ರೇಡಿಯೋ ಕೇಂದ್ರದ ಉದ್ದೇಶಗಳು :** ಸ್ಥಳೀಯ ಜನರಿಗೆ ಅವಶ್ಯವಿರುವ ಸೂಕ್ತ ಮಾಹಿತಿಯನ್ನು ನಿರಂತರವಾಗಿ ಸಕಾಲದಲ್ಲಿ ಪೂರೈಸುವುದು, ಸ್ಥಳೀಯ ವೈಶಿಷ್ಟ್ಯತೆ, ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವುದು, ಧ್ವನಿ ಇಲ್ಲದವರಿಗೆ ಧ್ವನಿಯಾಗುವುದು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು, ಶಿಕ್ಷಣ, ಆರೋಗ್ಯ, ದುರ್ಬಲರ

ಸಬಲೀಕರಣ ವಿಚಾರಗಳನ್ನೊಳಗೊಂಡಂತೆ ಸಮುದಾಯದ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ ನಿರಂತರವಾಗಿ ಪ್ರಸಾರ ಮಾಡುವ ಉದ್ದೇಶಗಳನ್ನು ಹೊಂದಿದೆ.

**ನಿಯುಕ್ತ ಶ್ರೋತೃಗಳು ಮತ್ತು ಸಮುದಾಯದ ಭಾಗವಹಿಸುವಿಕೆ :** ಸಮುದಾಯ ರೇಡಿಯೋ ಕೇಂದ್ರದ ವೈಶಿಷ್ಟ್ಯವೆಂದರೆ ಸಮುದಾಯದ ಭಾಗವಹಿಸುವಿಕೆಯೊಂದಿಗೆ ಸಮುದಾಯವನ್ನು ಮುನ್ನಡೆಸುವುದು. ವಿದ್ಯಾರ್ಥಿಗಳು, ಯುವಕ–ಯುವತಿಯರು, ಹಿರಿಯ ನಾಗರೀಕರು, ಕೂಲಿ ಕಾರ್ಮಿಕರು, ವಿವಿಧ ಕ್ಷೇತ್ರದ ತಜ್ಞರು, ಕೃಷಿಕರು ಹಾಗೂ ಜನಸಾಮಾನ್ಯರನ್ನೊಳಗೊಂಡಂತೆ ಮೈಸೂರು ನಗರದ ಸುಮಾರು 10 ಲಕ್ಷ ಜನರು ಈ ರೇಡಿಯೋ ಕೇಂದ್ರದ ಪ್ರಸಾರದ ವ್ಯಾಪ್ತಿಗೆ ಬರುತ್ತಾರೆ. ಸಾಮಾಜಿಕ–ಆರ್ಥಿಕ ಸಬಲೀಕರಣಗಳನ್ನೊಳಗೊಂಡಂತೆ ಶಿಕ್ಷಣ, ಆರೋಗ್ಯ, ವಿಜ್ಞಾನ, ಕ್ರೀಡೆ ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರತಿಯೊಬ್ಬರು ಭಾಗವಹಿಸಲು ಅವಕಾಶವಿದೆ.

**ಪ್ರಸಾರವಾಗುವ ಕಾರ್ಯಕ್ರಮಗಳು :** ಕರುಣಾಳು ಬಾ ಬೆಳಕೆ, ಜೀವ ಸಂಜೀವಿನಿ, ಪ್ರತಿಭಾ ವಿಲಾಸ, ಕಾವ್ಯ ಪರಂಪರೆ, ಕೃಷಿ, ಇದು ನಮ್ಮ ನಾಡು, ಭಾವ ಸಂಗಮ, ಇವರು ನಮ್ಮವರು, ಪರಿಸರ ಪರಿಚಯ, ಆಯುರ್‌ಸತ್ವ, ಜ್ಞಾನಸುಧಾ, ವಿಜ್ಞಾನ–ಜಾಣಸುದ್ದಿ, ಶಿಕ್ಷಣ, ಕಾನೂನು ಅರಿವು, ಚಿಂತನಧಾರೆ ಕುರಿತ ಸರಣಿ ಕಾರ್ಯಕ್ರಮಗಳು ಬಿತ್ತರವಾಗುತ್ತಿವೆ.

**ಜೆಎಸ್‌ಎಸ್ ರೇಡಿಯೋ ಕೇಳುವುದು ಹೇಗೆ :** ರೇಡಿಯೋ ಸೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ **91.2FM** ಅನ್ನು ಟ್ಯೂನ್ ಮಾಡುವ ಮೂಲಕ, ಆ್ಯಂಡ್ರೆಡ್ ಫೋನಿನಲ್ಲಿನ ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಜೆಎಸ್‌ಎಸ್ ರೇಡಿಯೋ ಆ್ಯಪ್ ಮೂಲಕ ಹಾಗೂ **www.jsscacs.edu.in** ವೆಬ್‌ಸೈಟಿನಲ್ಲಿ ಕೇಳಬಹುದು.

**ಪ್ರಸಾರವಾಗುವ ಸಮಯ : ಬೆಳಗ್ಗೆ 7.00 ರಿಂದ 8.00, ಸಾಯಂಕಾಲ 4.00 ರಿಂದ 5.00**

**ಜಾಹೀರಾತುಗಳಿಗೆ ಅವಕಾಶ :** ವಾಣಿಜ್ಯ ಉತ್ಪನ್ನ ಮತ್ತು ಸೇವೆಗಳ ಪ್ರಚಾರಕ್ಕಾಗಿ ಜಾಹೀರಾತು ನೀಡಲು ಅವಕಾಶವಿದೆ (ಷರತ್ತುಗಳು ಅನ್ವಯ). ಜಾಹೀರಾತು ಮತ್ತು ಶ್ರವ್ಯ–ದೃಶ್ಯ ಪ್ರಚಾರ ನಿರ್ದೇಶನಾಲಯದ (ಡಿ.ಎ.ವಿ.ಪಿ) ನಿಯಮಕ್ಕೆ ಅನುಗುಣವಾಗಿರುತ್ತದೆ.

■ ದೂರವಾಣಿ ಸಂಖ್ಯೆ : 0821-2546563, 8296725912

■ Email: jssradio91.2@gmail.com ■ Web: www.jsscacs.edu.in